(213) 158ನೇ ಸಾಲು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದ ರಾಜು ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:213 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ಮಲೆನಾಡು ಭಾಗವು ಅತೀ ಹೆಚ್ಚಾಗಿ ಕಾಫಿ ಬೆಳೆಯುವ ಪ್ರದೇಶವಾಗಿದ್ದು, ಈ ಭಾಗದಲ್ಲಿ ಕಳೆದ 3-4 ವರ್ಷಗಳಿಂದ ಅತೀ ಹೆಚ್ಚು ಮಳೆ ಬಿದ್ದ ಕಾರಣ, ಸರಿಯಾದ ಇಳುವರಿ ಬಾರದೇ, ರೈತರು ಅತೀಯಾದ ನಷ್ಟವನ್ನು ಅನುಭವಿಸಿ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ವಿದ್ಯುತ್ ಬಿಲ್ಲಿನ ಹಣವನ್ನು ಕಟ್ಟಲಾರದಂತ ಪರಿಸ್ಥಿತಿ ಎದುರಾಗಿದೆ. ಇದರ ನಡುವೆ ಅವರು ಉಪಯೋಗಿಸಿರುವ ವಿದ್ಯುತ್ ಗೆ ಕಟ್ಟಬೇಕಾಗಿರುವ ಬಾಕಿ ಹಣಕ್ಕೆ ಬಡ್ಡಿಯನ್ನು ಹಾಕಲಾಗಿರುತ್ತದೆ. ರೈತರು ಈಗಾಗಲೇ ಕಷ್ಟದಲ್ಲಿರುವುದರಿಂದ ವಿದ್ಯುತ್ ಬಾಕಿಗೆ ವಿಧಿಸಿರುವ ಬಡ್ಡಿ ಮನ್ನಾ ಮಾಡಬೇಕೆಂದು ರೈತರ ಒತ್ತಾಯವಾಗಿದೆ. ಸಂಕಷ್ಟದಲ್ಲಿರುವ ರೈತರ ಹಿತದೃಷ್ಟಿಯಿಂದ, ಮಲೆನಾಡು ಭಾಗದಲ್ಲಿರುವ ರೈತರು ಕಟ್ಟಬೇಕಾಗಿರುವ ವಿದ್ಯುತ್ ಬಾಕಿಗೆ ಬಡ್ಡಿ ಮನ್ನಾ ಮಾಡಿ, ಬಾಕಿ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲು ಅನುವು ಮಾಡಿಕೊಡಬೇಕೆಂದು,ಈ ವಿಷಯದ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದಿರುವ ಬಗ್ಗೆ.

* * * * *

**ಉತ್ತರ**:

ಸಣ್ಣ ಮತ್ತು ಮಧ್ಯಮ ಕಾಫಿ ಬೆಳೆಗಾರರ 10 HP ವರೆಗಿನ ನೀರಾವರಿ ವಿದ್ಯುತ್ ಪಂಪ್ ಸೆಟ್‌ಗಳ ವಿದ್ಯುತ್ ಶುಲ್ಕವನ್ನು ದಿನಾಂಕ: 01.07.2022 ರಿಂದ ಬಳಕೆ ಮಾಡುವ ವಿದ್ಯುಚ್ಛಕ್ತಿ ಬಿಲ್ಲನ್ನು ನಿಗದಿತ ದಿನಾಂಕದೊಳಗೆ ಪಾವತಿಗೊಳಿಸಿರುವ ಸ್ಥಾವರಗಳಿಗೆ DBT ವ್ಯವಸ್ಥೆಯಡಿ ಅರ್ಹ ಗ್ರಾಹಕರಿಗೆ ಮರು ಪಾವತಿಸಲು ದಿನಾಂಕ: 20.07.2022 ರನ್ವಯ ಆದೇಶವಾಗಿರುತ್ತದೆ. ಸದರಿ ಆದೇಶದನ್ವಯ ಮಾಸಿಕ ವಿದ್ಯುಚ್ಛಕ್ತಿ ಬಿಲ್ಲನ್ನು ನಿಗದಿತ ದಿನಾಂಕದೊಳಗೆ ಪಾವತಿಗೊಳಿಸಿರುವ ಸ್ಥಾವರಗಳಿಗೆ DBT ವ್ಯವಸ್ಥೆಯಡಿ ಹಿಂಪಾವತಿಸುವ ಪ್ರಕ್ರಿಯೆಗೆ ಅರ್ಹ ಸಣ್ಣ ಮತ್ತು ಮಧ್ಯಮ ಕಾಫಿ ಬೆಳೆಗಾರರು ಸೇವಾ ಸಿಂಧು ತಂತ್ರಾಂಶದಲ್ಲಿ ದಾಖಲುಗೊಳಿಸಬೇಕಾಗಿರುತ್ತದೆ.

ದಿನಾಂಕ: 01.07.2022 ರಿಂದ 31.12.2025 ರವರೆಗೆ ಮಾಸಿಕ ಸರಾಸರಿ 456 ವಿದ್ಯುತ್ ಸ್ಥಾವರಗಳು ನಿಗದಿತ ದಿನಾಂಕದೊಳಗೆ ಪಾವತಿಸಿರುವ ವಿದ್ಯುತ್ ಶುಲ್ಕ (ತೆರಿಗೆ ಹೊರತುಪಡಿಸಿ) ಮೊತ್ತ ರೂ.2.30 ಕೋಟಿಗಳನ್ನು ಹಿಂಪಾವತಿಸಲು ಈಗಾಗಲೇ ಕ್ರಮವಹಿಸಲಾಗುತ್ತಿದೆ.

ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:09.02.2026 ರಂದು ನಡೆದ ಸಭೆಯಲ್ಲಿ ದಿನಾಂಕ: 30.06.2022 ರ ಅಂತ್ಯದ ಕಾಫಿ ಬೆಳೆಗಾರರ ವಿದ್ಯುತ್ ಶುಲ್ಕದ ಒಟ್ಟು ಬಾಕಿ ಮೊತ್ತದಲ್ಲಿನ ಬಡ್ಡಿ ಮೊತ್ತ ರೂ.13 ಕೋಟಿಗಳನ್ನು ಪೂರ್ಣವಾಗಿ ಮನ್ನಾ ಮಾಡುವ ಬಗ್ಗೆ, ಈಗಾಗಲೇ ಪಾವತಿಸಿರುವ ಪ್ರಕರಣಗಳಲ್ಲಿ ಬಡ್ಡಿಗೆ ಹೊಂದಾಣಿಕೆಗೊಳಿಸಿರುವ ಮೊತ್ತವನ್ನು ಅಸಲಿನ ಮೊತ್ತಕ್ಕೆ ಹೊಂದಾಣಿಕೆಗೊಳಿಸಿ ಪರಿಷ್ಕೃತ ಬಾಕಿ ಮೊತ್ತವನ್ನು ಲೆಕ್ಕಾಚಾರಗೊಳಿಸುವ ಮತ್ತು ಬಾಕಿಯಿರುವ ಪ್ರಕರಣಗಳಲ್ಲಿ ವಿದ್ಯುತ್ ಶುಲ್ಕ ಮೊತ್ತವನ್ನು ಮೂರು ತಿಂಗಳ ಕಾಲಾವಕಾಶದೊಳಗಾಗಿ ಪಾವತಿಸಿದಲ್ಲಿ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಕಂಪನಿಯ ಆಡಳಿತ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಕ್ರಮವಹಿಸಲು ತಿಳಿಸಲಾಗಿರುತ್ತದೆ.

ಸಂಖ್ಯೆ: ಎನರ್ಜಿ 116 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು